3. 8996 ಶಾಲೆಗಳ 16.59 ಲಕ್ಷ ಮಕ್ಕಳು ಇದರ ವ್ಯಾಪ್ತಿಗೆ ಒಳಪಡುತ್ತಾರೆ.

4. 7751 ಊಟದ ಕೇಂದ್ರಗಳ ಪೈಕಿ 5371 ಕೇಂದ್ರ ಗಳಲ್ಲಿ ಪ್ರಾರಂಭವಾಗಿದೆ. ಇನ್ನು 2378 ಕೇಂದ್ರಗಳಲ್ಲಿ ಪ್ರಾರಂಭವಾಗಿರುವುದಿಲ್ಲ.

ಊ) ರೂ. 5,84,69,382.00 ಜಿಲ್ಲಾವಾರು ವೆಚ್ಚ ಈ ರೀತಿ ಇದೆ.

ಕೊಪ್ಪಳ - ರೂ. 82.94 ಲಕ್ಷ ರಾಯಚೂರು 107.62 ಲಕ್ಷ ಬಳ್ಳಾರಿ-ರೂ.87.97 ಲಕ್ಷ, ಗುಲ್ಬರ್ಗಾ-ರೂ.160.19 ಲಕ್ಷ ಬೀದರ್- ರೂ. 15.35 ಲಕ್ಷ, ಬಿಜಾಪುರ-ರೂ.30.27 ಲಕ್ಷ, ಬಾಗಲಕೋಟೆ-ರೂ. 99.36 ಲಕ್ಷ.

ರಾಜ್ಯದ ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ

488(449) - ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಿಜಯನಗರ) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯತ್‌ಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಮಾಹಿತಿ ನೀಡುವುದು.

ಆ) ಪ್ರತಿ ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ನೀಡುತ್ತಿರುವ ಹಣ ಎಷ್ಟು?

ಇ) ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಗ್ರಾಮ ಪಂಚಾಯತ್‌ಗಳಿಗೆ ನಿಗಧಿಪಡಿಸಿದ ಹಣವೆಷ್ಟು? ಬಿಡುಗಡೆ ಮಾಡಿದ ಹಣವೆಷ್ಟು? ಉಳಿದ ಹಣವೆಷ್ಟು? (ವರ್ಷವಾರು - ಮಾಹಿತಿ ನೀಡುವುದು)

ಶ್ರೀ ಕೆ.ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯತ್‌ಗಳ ಸಂಖ್ಯೆ 5659. ಅನುಬಂಧ - 1 ರಲ್ಲಿ ನೀಡಲಾಗಿದೆ.

ಆ) ಗ್ರಾಮ ಪಂಚಾಯತಿಗಳಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗುತ್ತದೆ.

1. ಶಾಸನಬದ್ಧ ಅನುದಾನ ರೂ. 2.00 ಲಕ್ಷ

2. ಅಭಿವೃದ್ಧಿ ಅನುದಾನ ರೂ. 1.50 ಲಕ್ಷ

3. ಹನ್ನೊಂದನೇ ಹಣಕಾಸು ಅನುದಾನವನ್ನು ಜನಸಂಖ್ಯೆಯ ಆಧಾರದ ಮೇಲೆ ತಲಾನುಧಾನ ರೂ. 24.31 ರಂತೆ ನೀಡಲಾಗುತ್ತದೆ.

ಇ) ಅನುಬಂಧ - 2ರಲ್ಲಿ ಲಗತ್ತಿಸಲಾಗಿದೆ.

ಅನುಬಂಧ - 1

ಜಿಲ್ಲಾ ಪಂಚಾಯತ್‌ವಾರು ಗ್ರಾಮ ಪಂಚಾಯತಿಗಳ ವಿವರ

ಕ್ರ.ಸಂ	ಜಿಲ್ಲಾ ಪಂಚಾಯತ್‌ನ ಹೆಸರು	ಗ್ರಾಮ ಪಂಚಾಯತ್‌ಗಳ ಸಂಖ್ಯೆ
1.	ಬೆಂಗಳೂರು (ನಗರ)	112
2.	ಬೆಂಗಳೂರು (ಗ್ರಾ)	228
3.	ಬೆಳಗಾಂ	485
4.	ಬಳ್ಳಾರಿ	189
5.	ಬೀದರ್	175
6.	ಬಿಜಾಪುರ	199
7.	ಚಿಕ್ಕಮಗಳೂರು	226
8.	ಚಿತ್ರದುರ್ಗ	185
9.	ದಕ್ಷಿಣ ಕನ್ನಡ	206
10.	ಧಾರವಾಡ	127
11.	ಗುಲ್ಬರ್ಗಾ	337
12.	ಹಾಸನ	258
13.	ಕೊಡಗು	99
14.	ಕೋಲಾರ	307
15.	ಮಂಡ್ಯ	232
16.	ಮೈಸೂರು	236
17.	ರಾಯಚೂರು	164
18.	ಶಿವಮೊಗ್ಗ	260
19.	ತುಮಕೂರು	321
20.	ಉತ್ತರ ಕನ್ನಡ	207
21.	ಚಾಮರಾಜನಗರ	121
22.	ದಾವಣಗೆರೆ	230
23.	ಬಾಗಲಕೋಟೆ	163
24.	ಗದಗ	106
25.	ಹಾವೇರಿ	206
26.	ಉಡುಪಿ	146
27.	ಕೊಪ್ಪಳ	134
	ಒಟ್ಟು	5659

ಅನುಬಂಧ - 2

ಕ್ರಮ ಸಂಖ್ಯೆ	ವರ್ಷ	ಶಾಸನಬದ್ಧ ಅನುದಾನ		ಅಭಿವೃದ್ಧಿ ಅನುದಾನ		ಹನ್ನೊಂದನೇ ಹಣಕಾಸು	
		ನಿಗಧಿ	ಬಿಡುಗಡೆ	ನಿಗಧಿ	ಬಿಡುಗಡೆ	ನಿಗಧಿ	ಬಿಡುಗಡೆ
1.	2000-01	11268	9464	-	-	-	-
2.	2001-02	11318	7276	9168	5454	7882	7882
3.	2002-03	11318	2425	9168	1965	7882	-

2000-01 ನೇ ಸಾಲಿನಲ್ಲಿ ಅಭಿವೃದ್ಧಿ ಅನುದಾನ ಯೋಜನೆ ಇರಲಿಲ್ಲ.

2000-01 ನೇ ಸಾಲಿನಲ್ಲಿ ಹನ್ನೊಂದನೇ ಹಣಕಾಸು ಯೋಜನೆಯಡಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿರುವುದಿಲ್ಲ.

2002-03ನೇ ಸಾಲಿಗೆ ಹನ್ನೊಂದನೇ ಹಣಕಾಸು ಆಯೋಗದಡಿ ಹಣವನ್ನು ಸದ್ಯದಲ್ಲಿಯೇ ಬಿಡುಗಡೆ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಸರ್ಕಾರಿ ವೈದ್ಯಕೀಯ ಹಾಗೂ ದಂತ ಕಾಲೇಜುಗಳು

489(450) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಹಾಗೂ ದಂತ ಕಾಲೇಜುಗಳೆಷ್ಟು?

ಆ) ಇವುಗಳಲ್ಲಿರತಕ್ಕ ಎಂಬಿಬಿಎಸ್ ಸೀಟುಗಳ ಸಂಖ್ಯೆ ಎಷ್ಟು?

ಇ) ಇವುಗಳಲ್ಲಿರತಕ್ಕ ಸ್ನಾತಕೋತ್ತರ ಕೋರ್ಸುಗಳ ಸೀಟುಗಳ ಸಂಖ್ಯೆ ಎಷ್ಟು?

ಈ) ಈ ಕಾಲೇಜುಗಳಲ್ಲಿ ಎಂಬಿಬಿಎಸ್ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಶೇಕಡಾ 15 ರಷ್ಟು ಸೀಟುಗಳನ್ನು ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ಮೇಲೆ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆಯೇ?

ಉ) ಹಾಗಿದ್ದಲ್ಲಿ ಈ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕವೆಷ್ಟು?

ಊ) ಇದರಿಂದ ಮೆರಿಟ್ ವಿದ್ಯಾರ್ಥಿಗಳ ಸೀಟುಗಳು ಕಡಿಮೆಯಾಗುವುದಿಲ್ಲವೇ?

ಡಾ. ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ರಾಜ್ಯದಲ್ಲಿ ನಾಲ್ಕು ಸರ್ಕಾರಿ ವೈದ್ಯಕೀಯ ಹಾಗೂ ಒಂದು ದಂತ ವಿದ್ಯಾಲಯ ಇರುವುವು.

ಆ) ಈ ಸಾಲಿನಲ್ಲಿ ಇದುವರೆವಿಗೆ ಮಂಜೂರಾಗಿರುವ ಸೀಟುಗಳು 400

ಇ) ಇರುವ ಸ್ನಾತಕೋತ್ತರ ಸೀಟುಗಳ ವಿವರ ಈ ಕೆಳಕಂಡಂತೆ ಇದೆ.